

# ಉದ್ಯಮಿಯ ಚಿತ್ರಪ್ರೇಮ

ಹ್ಯುನಬ್ ಸಂಜಾತ ಝೂಂಗ್ ವೀ ಅವರಿಗೀಗ 52ರ ಪ್ರಾಯ. 20 ವರ್ಷ ಅವರು ಉದ್ಯಮಿಯಾಗಿ ಯಶಸ್ವಿಯಾದವರು. ಹಣಕಾಸಿನ ಗಳಿಕೆಯಲ್ಲೂ ಅವರಿಗೆಂದೂ ನಿರಾಸೆಯಾಗಲಿಲ್ಲ. ತಮ್ಮ ಸುತ್ತಲ ಘಟನಾವಳಿಗಳನ್ನು ತೆರೆಯ ಮೇಲೆ ತಂದರೆ ಹೇಗಿರುತ್ತದೆ ಎಂಬ ಕುತೂಹಲ ಸದಾ ಅವರಿಗಿತ್ತು. ಪತ್ರಿಕೆಗಳನ್ನು ತಿರುವಿಹಾಕಿದಾಗ ಯಾವುದಾದರೊಂದು ಸಮಸ್ಯೆ ಬಿಂಬಿಸುವ ಸುದ್ದಿ ಇದ್ದರೆ ಅವರ ನೋಟ ಅದಕ್ಕೆ ಕೀಲಿಸುತ್ತಿತ್ತು. ಆ ಸಮಸ್ಯೆಯೇ ಸಿನಿಮಾ ಆದರೆ ಹೇಗೆ ಎಂದೂ ಅನಿಸುತ್ತಿತ್ತು. ಒಮ್ಮೆ ಅವರು ಸಿನಿಮಾ ನಿರ್ದೇಶಕ ಆಗಲೇಬೇಕು ಎಂದು ತೀರ್ಮಾನಿಸಿದರು. 'ಬೀಜಿಂಗ್ ಫಿಲ್ಮ್ ಅಕಾಡೆಮಿ'ಗೆ ಸೇರಿದರು. 'ಚೈನೀಸ್ ನ್ಯಾಷನಲ್ ಅಕಾಡೆಮಿ ಆಫ್ ಆರ್ಟ್ಸ್'ಗೆ ಸೇರಿ ಸಿನಿಮಾ ತಯಾರಿಕೆಯ ವಿಧಾನದ ಕಲಾತ್ಮಕ ಆಯಾಮಗಳನ್ನು ಅರಿತರು.

ಹಿಂದೆ ಅವರು ನಿರ್ದೇಶಿಸಿದ ಚಿತ್ರ 'ಫ್ಯಾಕ್ಟರಿ ಬಾಸ್'. ಉದ್ಯಮಿಯಾಗಿ ತಾನು ಕಂಡ ಜಗತ್ತಿಗೆ ಕನ್ನಡಿ ಹಿಡಿದ ಪ್ರಾಮಾಣಿಕ ಪ್ರಯತ್ನ ಅದು. ಚೀನಾದ ಸಣ್ಣ ಕೈಗಾರಿಕೆಗಳ ಕ್ಷೇತ್ರದಲ್ಲಿ ಗುಪ್ತಗಾಮಿನಿಯಂತೆ ಆಗುತ್ತಿರುವ ಬದಲಾವಣೆಯನ್ನು ದಾಖಲಿಸಿದ ಚಿತ್ರ ಅದು. 2014ರಲ್ಲಿ 'ಮಾಂಟ್ರಿಯಲ್ ಚಿತ್ರೋತ್ಸವ'ದಲ್ಲಿ ಆ ಸಿನಿಮಾದ ಅಭಿನಯಕ್ಕೆ ನಟ ಯಾವೊ ಅನ್ಲಿಯಾನ್‌ಗೆ ಶ್ರೇಷ್ಠ ನಟ ಪ್ರಶಸ್ತಿಯೂ ಸಂದಿತು.

'ಡೆಸ್ಟಿನಿ' ಪತ್ರಿಕೆಯಲ್ಲಿ ಝೂಂಗ್ ವೀ ಓದಿದ ಸುದ್ದಿಯೊಂದರಿಂದ ಮೂಡಿದ ಆಲೋಚನೆಯ ಫಲ. ತೃತೀಯ ಲಿಂಗಿಗಳ ಕುರಿತ 'ರಿಬ್' ಎಂಬ ಸಿನಿಮಾ ಅವರ ಇನ್ನೊಂದು ಕನವರಿಕೆ. ಸುದ್ದಿಗಳನ್ನೇ ಸಿನಿಮಾ ಆಗಿಸುವ ಜಾಯಮಾನದ ಝೂಂಗ್ ವೀ, ಚಿತ್ರಪ್ರೀತಿಯ ಕಾರಣಕ್ಕೆ ಸುದ್ದಿಯಾದವರೂ ಹೌದು.

**ಚಿತ್ರ:** ಡೆಸ್ಟಿನಿ.
**ನಿರ್ದೇಶಕರು:** ಝೂಂಗ್ ವೀ
**ಭಾಷೆ:** ಚೀನಿ